KATK200009872020

**<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ, ರವರ ನ್ಯಾಯಾಲಯ, ಚಿಕ್ಕನಾಯಕನಹಳ್ಳಿ.</u>**

**ಉಪಸ್ಥಿತರು :- ಶ್ರೀ ಸತೀಶ್. ಎಸ್.ಟಿ., ಬಿ.ಕಾಂ., ಎಲ್.ಎಲ್.ಬಿ.,**
**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಚಿಕ್ಕನಾಯಕನಹಳ್ಳಿ.**

**ದಿನಾಂಕ:- 18ನೇ ಜೂನ್ ಮಾಹೆ 2026.**

**<u>ಸಿ.ಸಿ.ನಂ.497/2020</u>**

**ಪಿರ್ಯಾದಿದಾರರು:** ಹಂದನಕೆರೆ ಪೊಲೀಸ್ ಠಾಣೆ, ಹಂದನಕೆರೆ
**(ಸಹಾಯಕ ಸರ್ಕಾರಿ ಅಭಿಯೋಜಕರು)**

**<u>ವಿರುದ್ಧ</u>**

**ಆರೋಪಿತರು :** ರಮೇಶ್ ಕೆ.ಬಿ ಬಿನ್ ಬಸವರಾಜು
ವಯಸ್ಸು 48 ವರ್ಷ,
ವಾಸಃ ಕೋಡಿಪಾಳ್ಯ ಗ್ರಾಮ,
ಹಂದನಕೆರೆ ಹೋಬಳಿ,
ಚಿಕ್ಕನಾಯಕನಹಳ್ಳಿ ತಾ.
**(ಶ್ರೀ.ಎನ್.ಎಸ್ ವಕೀಲರು)**

**<u>ತೀರ್ಪು</u>**

ಈ ದೋಷಾರೋಪಣೆ ಪಟ್ಟಿಯನ್ನು ಹಂದನಕೆರೆ ಪೊಲೀಸ್ ಠಾಣೆಯ ಆರಕ್ಷಕ ಸಹಾಯಕ ನಿರೀಕ್ಷಕರು ಆರೋಪಿ ವಿರುದ್ಧ ಅಬಕಾರಿ ಕಾಯ್ದೆ ಕಲಂ.32 ಮತ್ತು 34 ರ ಅಡಿಯಲ್ಲಿ ಶಿಕ್ಷಿಸಲು ಪಡುವ ಅಪರಾಧಕ್ಕೆ ಸಲ್ಲಿಸಿರುತ್ತಾರೆ.

**<u>ಅಭಿಯೋಜನೆಯ ಈ ಪ್ರಕರಣದ ಸಂಕ್ಷಿಪ್ತ ಸಾರಾಂಶ ಈ ಕೆಳಗಿನಂತೆ ಇರುತ್ತದೆ.</u>**

2. ದಿನಾಂಕ 22.03.2020 ರಂದು ಮಧ್ಯಾಹ್ನ 12-15 ಕ್ಕೆ ಹಂದನಕೆರೆ ಹೋಬಳಿಯ, ದೊಡ್ಡಪಾಳ್ಯ ಗ್ರಾಮದ ಚಾಸಾ-11 ನಾಗರಾಜು ರವರ ಹೆಸರಿನಲ್ಲಿಇ ರುವ ಮಲ್ಲಿಗೆರೆ ಗ್ರಾಮ ಸರ್ವೆ ನಂ.382/1 ರ ಜಮೀನಿನಲ್ಲಿ ಇರುವ ತೋಟದ ಮನೆಯಲ್ಲಿ ಅಡಿಗೆ ಕೋಣೆಯಲ್ಲಿ ವಿವಿಧ ಬಗೆಯ ಹಾಟ್ ಡ್ರಿಂಕ್ಸ್ ಹಾಗೂ ಕೋಲ್ಡ ಡ್ರಿಂಕ್ಸ್ ಅನ್ನು ಯಾವುದೇ ಪರವನಾಗಿ ಇಲ್ಲದೆ ಸಂಗ್ರಹ ಮಾಡಿಟ್ಟುಕೊಂಡು ಅವುಗಳನ್ನು ಹೆಚ್ಚಿನ ಬೆಲೆಗೆ ಮಾರಾಟ ಮಾಡುವ ಉದ್ದೇಶ ಹೊಂದಿದ್ದರಿಂದ ಈ ದೂರನ್ನು ಸಲ್ಲಿಸಲಾಗಿದೆ.

3. ಅಭಿಯೋಜನೆಯು ಮುಂದುವರೆದು ಚಿಕ್ಕನಾಯಕನಹಳ್ಳಿ ವೃತ್ತದ ಸಿಪಿಐ ಇವರು ದಿನಾಂಕ 22.03.2020 ರಂದು ನನಗೆ ಬಂದ ಖಚಿತ ಮಾಹಿತಿ ಮೇರೆಗೆ ಹಂದನಕೆರೆ ಪೊಲೀಸ್ ಠಾಣೆಗೆ ಹೋಗಿ ಸಿಬ್ಬಂದಿಯವರು ಮತ್ತು ಪಂಚರನ್ನು ಬರಮಾಡಿಕೂಂಡು ಇಲಾಖಾ ವಾಹನಗಳಲ್ಲಿ ಬೆಳಗ್ಗೆ ಸುಮಾರು 11.30 ಗಂಟೆಗೆ ಹೊರಡು ಸಾಲುಮನೆ ಪಾಳ್ಯ ಗೇಟ್ ಬಳಿ ಹೋಗಿ ಅಲ್ಲಿಂದ ಉತ್ತರಕ್ಕೆ ಅರ್ಧ ಕೀ ಮಿ ಎಲ್ಲರೂ ವಾಹನಗಳಿಂದ ಇಳಿದು ನಡೆದುಕೊಂಡು ಹೋಗಿ ಸ್ವಲ್ಪ ದೂರದಲ್ಲಿ ಒಂದು ಶೀಟ್ ನ ಮನೆ ಇತ್ತು, ಅಲ್ಲಿ 3-4 ಜನ ಓಡಡುತ್ತಿರುವುದು ಕಂಡಬು ಬಂದಿತು. ಸ್ಥಳಕ್ಕೆ ಹೋಗಿ ನೋಡಲಾಗಿ ಸ್ಥಳದಲ್ಲಿ ಒಬ್ಬ ವ್ಯಕ್ತಿಯು ಅಕ್ರಮವಾಗಿ ಮಧ್ಯ ಮಾರಾಟ ಮಾಡುತ್ತಿರುವುದು ಕಂಡು ಬಂದಿತು. ಸದರಿ ಅವರನ್ನು ಹೆಸರು ಮತ್ತು ವಿಳಾಸ ವಿಚಾರಿಸಲಾಗಿ ಹೆಸರು ರಮೇಶ್, ಕೋಡಿಪಾಳ್ಯ ಗ್ರಾಮ, ಹಂದನಕೆರೆ ಹೋ. ಎಂದು ತಿಳಿಸಿದ್ದು ಮಧ್ಯ ಮಾರಾಟದ ಬಗ್ಗೆ ಸದರಿ ಅವರನ್ನು ವಿಚಾರಿಸಲಾಗಿ ಸದರಿ ಅವರು ಯಾವುದೇ ಪರವನಾಗಿಯನ್ನು ಹೊಂದದೇ ಅಕ್ರಮವಾಗಿ ಕಾನೂನು ಬಾಹಿರವಾಗಿ ಮಾರಾಟ ಮಾಡುತ್ತಿರುವುದು ಕಂಡು ಬಂದಿತು. ನಂತರ ಮನೆಯ ಒಳಗೆ ಹೋಗಿ ನೋಡಲಾಗಿ ಒಂದು ಹಾಲ್ ಇದ್ದು ಹಾಲ್ ನ ನಂತರ ಒಂದು ಅಡುಗೆ ಮನೆ ಇದ್ದು ರಟ್ಟಿನ ಬಾಕ್ಸ್ ಗಳಿದ್ದು ಅವುಗಳನ್ನು ಪರಿಶೀಲಿಸಲಾಗಿ ಐ ವರ್ಡ್ಸ್ಸ್ ಕಂಪನಿಯ 90 ಎಂ ಎಲ್ ನ 460 ಟೆಟ್ರಾ ಪ್ಯಾಕೇಟ್ ಗಳು ಇದ್ದು, ರಾಜಾ ವಿಸ್ಕಿ ಕಂಪನಿಯ 90 ಎಂ ಎಲ್ ನ 96 ಟೆಟ್ರಾ ಪ್ಯಾಕೇಟ್ ಗಳು ಇದ್ದು, ಬ್ಯಾಕ್ ಪೈಪರ್ ಕಂಪನಿಯ 180 ಎಂ ಎಲ್ ನ 80 ಟೆಟ್ರಾ ಪ್ಯಾಕೇಟ್ ಗಳು ಇದ್ದು, ನಂತರ ನಾಕ್ ಔಟ್ ಕಂಪನಿಯ 330 ಎಂ ಎಲ್ ನ 24 ಟನ್ ಗಳು ಇವುಗಳ ಒಟ್ಟು ಬೆಲೆ ಸುಮಾರು ರೂ.26500/- ಆಗಿದ್ದು ಇವುಗಳನ್ನು ಪಂಚರ ಸಮಕ್ಷಮ ಮಹಜರ್ ಮಾಡಿ ಅಮಾನತ್ತು ಪಡಿಸಿಕೊಂಡಿರುತ್ತಾರೆ. ನಂತರ ಇವುಗಳನ್ನು ಪರೀಕ್ಷೆಗೆ ಕಳುಹಿಸುವ ಸಂಬಂಧ ಎಲ್ಲಾ ಬ್ರಾಂಡ್ ಗಳ ಒಂದೊಂದು ಪ್ಯಾಕೇಟುಗಳನ್ನು ಸೀಸ್ ಮಾಡಿ ಬಿಳಿ ಬಟ್ಟೆಯಲ್ಲಿ ಕಟ್ಟಿ ಹೆಚ್ ಎಂಬ ಅಕ್ಷರದಿಂದ ಸೀಲ್ ಮಾಡಿ ಸಹಿ ಮಾಡಿರುತ್ತಾರೆ. ನಂತರ ಆರೋಪಿ ಮತ್ತು ಮಾಲುಗಳ ಸಮೇತ ಠಾಣೆಗೆ ಬಂದು ಪಿಎಸ್ಐ ರವರಿಗೆ ಕ್ರಮ ತೆಗೆದುಕೊಳ್ಳುವಂತೆ ವರದಿ ನೀಡಿರುತ್ತಾರೆ..

4. ವರದಿಯನ್ನು ಪಡೆದ ಅನ್ವಯ ಹಂದನಕೆರೆ ಪೋಲಿಸ್ ಠಾಣೆಯ ಆರಕ್ಷಕ ಉಪನಿರೀಕ್ಷಕರು ಪ್ರಕರಣವನ್ನು ನೊಂದಾಯಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ನೊಂದಾಯಿಸಿ ನ್ಯಾಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ. ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಾರೆ ನಂತರ ಸಂಪನ್ನಾಗಿ ತೆಗೆದ ಮದ್ಯವನ್ನು ಅವರ ಸಿಬ್ಬಂದಿಯು ರಾಸಾಯನಿಕ ಪರೀಕ್ಷೆಗೆ ಕಳುಹಿಸಿಕೊಟ್ಟು ಸಾಕ್ಷಿಗಳ ಹೇಳಿಕೆ ಪಡೆದಿರುತ್ತಾರೆ. ನಂತರ ಕೃತ್ಯ ನಡೆದ ಸ್ಥಳದ ದಾಖಲೆ ಕೋರಿ ತಹಶೀಲ್ದಾರ್ ಚಿಕ್ಕನಾಯಕನಹಳ್ಳಿ ರವರಿಗೆ ಪತ್ರ ಬರೆದು ದಾಖಲೆಯನ್ನು ಪಡೆದು FSL ವರದಿಯನ್ನು ಪಡೆದು ತನಿಖೆ ಮುಗಿಸಿ ಆರೋಪಿಯ ವಿರುದ್ದ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

5. ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿದ ನಂತರ ಈ ಪ್ರಕರಣದ ಸಂಜ್ಞೆಯನ್ನು ತೆಗೆದುಕೊಳ್ಳಲು ಸಾಕಷ್ಟು ಅಂಶಗಳು ಕಂಡುಬಂದಿದ್ದರಿಂದ, ಈ ಪ್ರಕರಣದ ಸಂಜ್ಞೆಯನ್ನು ತೆಗೆದುಕೊಂಡು ಆರೋಪಿಗಳಿಗೆ ಸಮನ್ಸ್ ನ್ನು ಜಾರಿ ಮಾಡಲಾಗಿದೆ. ನಂತರ ದೋಷಾರೋಪಣೆ ಪಟ್ಟಿಯ ನಕಲನ್ನು ಒದಗಿಸಿ, ದೋಷಾರೋಪಣೆ ರಚಿಸಿ ಓದಿ ಹೇಳಲಾಯಿತು. ಆರೋಪಿಯು ನಾನು ಯಾವುದೇ ತಪ್ಪನ್ನು ಮಾಡಿರುವುದಿಲ್ಲ, ಪ್ರಕರಣವನ್ನು ವಿಚಾರಣೆಗೆ ಒಳಪಡಿಸಬೇಕೆಂದು ಕೇಳಿಕೊಂಡಿರುತ್ತಾರೆ. ಆದ್ದರಿಂದ ಪ್ರಕರಣವನ್ನು ವಿಚಾರಣೆಗೆ ಇಡಲಾಯಿತು.

6. ಅಭಿಯೋಜನೆಯು ತನ್ನ ಪ್ರಕರಣವನ್ನು ರುಜುವಾತು ಪಡಿಸಲು ಒಟ್ಟಾರೆ 9 ಸಾಕ್ಷಿಗಳನ್ನು ಪ್ರಾಸಾ-1 ರಿಂದ 9 ಎಂದು ವಿಚಾರಣೆ ಮಾಡಿ, 13 ದಾಖಲೆಗಳನ್ನು ನಿಪಿ-1 ರಿಂದ 13 ಎಂದು ಗುರುತಿಸಲಾಗಿದೆ. ಜಪ್ತಿ ಮಾಡಿಕೊಂಡು ಮದ್ಯ ಮುಮಾ-1 ರಿಂದ 4 ಎಂದು ಗುರುತಿಸಲಾಯಿತು. ಅಭಿಯೋಜನೆಯ ಸಾಕ್ಷಿ ವಿಚಾರಣೆ ಆದ ನಂತರ ದಂ.ಪ್ರ.ಸಂ. ಕಲಂ. 313 ರ ಅಡಿಯಲ್ಲಿ ಆರೋಪಿಯ ಹೇಳಿಕೆಯನ್ನು ಪಡೆಯಲಾಯಿತು. ಆರೋಪಿಯು ತನ್ನ ವಿರುದ್ಧದ ಅಂಶಗಳನ್ನು ಅಲ್ಲಗಳೆದಿರುತ್ತಾರೆ ಮತ್ತು ತಮ್ಮ ಪ್ರತಿರಕ್ಷಣೆಗೆ ಯಾವುದೇ ಸಾಕ್ಷಿಯನ್ನು ಮಾಡಿಸಿರುವುದಿಲ್ಲ.

7. ನಾನು ಉಭಯತರ ಪಕ್ಷಗಾರರ ವಾದ-ವಿವಾದವನ್ನು ಕೇಳಿರುತ್ತೇನೆ.

8. ಕಡತವನ್ನು ಪರಿಶೀಲಿಸಿರುತ್ತೇನೆ.

9. ಈ ಪ್ರಕರಣವನ್ನು ನಿರ್ಣಯಿಸಲು ಈ ಕೆಳಗಿನ ಅಂಶಗಳು ಉದ್ಭವಿಸುತ್ತವೆ.

**ಅಂಶಗಳು**

1. ಅಭಿಯೋಜನೆಯು ದಿನಾಂಕ 22.03.2020 ರಂದು ಮಧ್ಯಾಹ್ನ 12-15 ಕ್ಕೆ ಹಂದನಕೆರೆ ಹೋಬಳಿಯ, ದೊಡ್ಡಪಾಳ್ಯ ಗ್ರಾಮದ ಜಾಸಾ-11 ನಾಗರಾಜು ರವರ ಹೆಸರಿನಲ್ಲಿಇ ರುವ ಮಲ್ಲಿಗೆರೆ ಗ್ರಾಮ ಸರ್ವೆ ನಂ.382/1 ರ ಜಮೀನಿನಲ್ಲಿ ಇರುವ ತೋಟದ ಮನೆಯಲ್ಲಿ ಅಡಿಗೆ ಕೋಣೆಯಲ್ಲಿ ವಿವಿಧ ಬಗೆಯ ಹಾಟ್ ಡ್ರಿಂಕ್ಸ ಹಾಗೂ ಕೋಲ್ಡ ಡ್ರಿಂಕ್ಸ ನ್ನು ಯಾವುದೇ ಪರವನಾಗಿ ಇಲ್ಲದೆ ಸಂಗ್ರಹ ಮಾಡಿಟ್ಟುಕೊಂಡು ಅವುಗಳನ್ನು ಹೆಚ್ಚಿನ ಬೆಲೆಗೆ ಮಾರಾಟ ಮಾಡುವ ಉದ್ದೇಶ ಹೊಂದಿದ್ದರಿಂದ ಅಬಕಾರಿ ಕಾಯ್ದೆ ಕಲಂ. 32 ಮತ್ತು 34 ರ ಅಡಿಯಲ್ಲಿ ಅಪರಾಧ ಎಸಗಿರುತ್ತಾರೆಂದು ನಿಸ್ಸಂದೇಹವಾಗಿ ಸಾಬೀತುಪಡಿಸುವರೇ?

2. ಯಾವ ಆದೇಶ?

10. ಈ ಮೇಲಿನ ಅಂಶಗಳಿಗೆ ನನ್ನ ಉತ್ತರ ಈ ಕೆಳಗಿನಂತಿರುತ್ತದೆ.

**ಅಂಶ 1 : ನಕಾರಾತ್ಮಕವಾಗಿ**
**ಅಂಶ 2 : ಅಂತಿಮ ಆದೇಶದಂತೆ ಈ ಕೆಳಕಂಡ**

**ಕಾರಣಗಳಿಗಾಗಿ**

11. **ಅಂಶ-1:** ಅಭಿಯೋಜನೆಯು ತನ್ನ ಪ್ರಕರಣವನ್ನು ರುಜುವಾತು ಪಡಿಸಲು ಪಿರ್ಯಾದಿದಾರರಾದ ವೀಣಾ ಸಿ.ಪಿ.ಐ, ಚಿಕ್ಕನಾಯಕನಳ್ಳಿ ವೃತ್ತ ರವರನ್ನು ಪ್ರಾಸಾ-1 ಆಗಿ ವಿಚಾರಣೆ ಮಾಡಿ, ಅವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಅಭಿಯೋಜನೆಯಲ್ಲಿ ಪೂರಕವಾಗಿ ಸಾಕ್ಷಿ ನುಡಿದಿರುತ್ತಾರೆ. ಪ್ರಾಸಾ-1 ರವರು ತಮ್ಮ ಮುಖ್ಯವಿಚಾರಣೆಯಲ್ಲಿ ಸಿಪಿಐ ಚಿಕ್ಕನಾಯಕನಹಳ್ಳಿ ವೃತ್ತ ಇವರು ತಮ್ಮ ವಿಚಾರಣೆಯಲ್ಲಿ ದಿನಾಂಕ 22.03.2020 ರಂದು ನನಗೆ ಬಂದ ಖಚಿತ ಮಾಹಿತಿ ಮೇರೆಗೆ ಹಂದನಕೆರೆ ಪೊಲೀಸ್ ಠಾಣೆಗೆ ಹೋಗಿ ಸಿಬ್ಬಂದಿಯವರು ಮತ್ತು ಪಂಚರನ್ನು ಬರಮಾಡಿಕೂಂಡು ಇಲಾಖಾ ವಾಹನಗಳಲ್ಲಿ ಬೆಳಗ್ಗೆ ಸುಮಾರು 11.30 ಗಂಟೆಗೆ ಹೊರಡು ಸಾಲುಮನೆ ಪಾಳ್ಯ ಗೇಟ್ ಬಳಿ ಹೋಗಿ ಅಲ್ಲಿಂದ ಉತ್ತರಕ್ಕೆ ಅರ್ಧ ಕೀ ಮಿ ಎಲ್ಲರೂ ವಾಹನಗಳಿಂದ ಇಳಿದು ನಡೆದುಕೊಂಡು ಹೋಗಿ ಸ್ವಲ್ಪ ದೂರದಲ್ಲಿ ಒಂದು ಶೀಟ್ ನ ಮನೆ ಇತ್ತು, ಅಲ್ಲಿ 3-4 ಜನ ಓಡಡುತ್ತಿರುವುದು ಕಂಡಬು ಬಂದಿತು. ಸ್ಥಳಕ್ಕೆ ಹೋಗಿ ನೋಡಲಾಗಿ ಸ್ಥಳದಲ್ಲಿ ಒಬ್ಬ ವ್ಯಕ್ತಿಯು ಅಕ್ರಮವಾಗಿ ಮಧ್ಯ ಮಾರಾಟ ಮಾಡುತ್ತಿರುವುದು ಕಂಡು ಬಂದಿತು. ಸದರಿ ಅವರನ್ನು ಹೆಸರು ಮತ್ತು ವಿಳಾಸ

ವಿಚಾರಿಸಲಾಗಿ ಹೆಸರು ರಮೇಶ್, ಕೋಡಿಪಾಳ್ಯ ಗ್ರಾಮ, ಹಂದನಕೆರೆ ಹೋ. ಎಂದು ತಿಳಿಸಿದ್ದು ಮಧ್ಯ ಮಾರಾಟದ ಬಗ್ಗೆ ಸದರಿ ಅವರನ್ನು ವಿಚಾರಿಸಲಾಗಿ ಸದರಿ ಅವರು ಯಾವುದೇ ಪರವನಾಗಿಯನ್ನು ಹೊಂದದೇ ಅಕ್ರಮವಾಗಿ ಕಾನೂನು ಬಾಹಿರವಾಗಿ ಮಾರಾಟ ಮಾಡುತ್ತಿರುವುದು ಕಂಡು ಬಂದಿತು. ನಂತರ ಮನೆಯ ಒಳಗೆ ಹೋಗಿ ನೋಡಲಾಗಿ ಒಂದು ಹಾಲ್ ಇದ್ದು ಹಾಲ್ ನ ನಂತರ ಒಂದು ಅಡುಗೆ ಮನೆ ಇದ್ದು ರಟ್ಟಿನ ಬಾಕ್ಸ್ ಗಳಿದ್ದು ಅವುಗಳನ್ನು ಪರಿಶೀಲಿಸಲಾಗಿ ಐ ವರ್ಡ್ಸ್ಸ್ ಕಂಪನಿಯ 90 ಎಂ ಎಲ್ ನ 460 ಟೆಟ್ರಾ ಪ್ಯಾಕೇಟ್ ಗಳು ಇದ್ದು , ರಾಜಾ ವಿಸ್ಕಿ ಕಂಪನಿಯ 90 ಎಂ ಎಲ್ ನ 96 ಟೆಟ್ರಾ ಪ್ಯಾಕೇಟ್ ಗಳು ಇದ್ದು, ಬ್ಯಾಕ್ ಪೈಪರ್ ಕಂಪನಿಯ 180 ಎಂ ಎಲ್ ನ 80 ಟೆಟ್ರಾ ಪ್ಯಾಕೇಟ್ ಗಳು ಇದ್ದವು. ನಂತರ ನಾಕ್ ಔಟ್ ಕಂಪನಿಯ 330 ಎಂ ಎಲ್ ನ 24 ಟನ್ ಗಳು ಇವುಗಳ ಒಟ್ಟು ಬೆಲೆ ಸುಮಾರು ರೂ.26500/- ಆಗಿದ್ದು ಇವುಗಳನ್ನು ಪಂಚರ ಸಮಕ್ಷಮ ಮಹಜರ್ ಮಾಡಿ ಅಮಾನತ್ತು ಪಡಿಸಿಕೊಳ್ಳಲಾಯಿತು. ನಂತರ ಇವುಗಳನ್ನು ಪರೀಕ್ಷೆಗೆ ಕಳುಹಿಸುವ ಸಂಬಂಧ ಎಲ್ಲಾ ಬ್ರಾಂಡ್ ಗಳ ಒಂದೊಂದು ಪ್ಯಾಕೇಟುಗಳನ್ನು ಸೀಸ್ ಮಾಡಿ ಬಿಳಿ ಬಟ್ಟೆಯಲ್ಲಿ ಕಟ್ಟಿ ಹೆಚ್ ಎಂಬ ಅಕ್ಷರದಿಂದ ಸೀಲ್ ಮಾಡಿ ಸಹಿ ಮಾಡಿರುತ್ತೇವೆ. ನಂತರ ಆರೋಪಿ ಮತ್ತು ಮಾಲುಗಳ ಸಮೇತ ಠಾಣೆಗೆ ಬಂದು ಪಿಎಸ್ಐ ರವರಿಗೆ ಕ್ರಮ ತೆಗೆದುಕೊಳ್ಳುವಂತೆ ವರದಿ ನೀಡಿರುತ್ತೇವೆ ಎಂದು ನುಡಿದು, ಮಹಜರ್, ದೂರಿನಲ್ಲಿ ತಮ್ಮ ಸಹಿ ಗುರುತಿಸಿ ಆರೋಪಿಯನ್ನು ನ್ಯಾಯಾಲಯದಲ್ಲಿ ಗುರುತಿಸಿ ಜಪ್ತಿಮಾಡಿಕೊಂಡ ಮುದ್ದೆಮಾಲುಗಳನ್ನು ಗುರುತಿಸಿರುತ್ತಾರೆ.

12. ಪ್ರಾಸಾ-1 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಅಭಿಯೋಜನೆಗೆ ಪೂರಕವಾಗಿ ಸಾಕ್ಷಿ ನುಡಿದಿದ್ದರೂ ಇವರ ಸಾಕ್ಷಿಯನ್ನು ಪುಷ್ಟಿಕರಿಸಲು ಪಂಚರಾಗಿ ಪ್ರಾಸಾ-1 ಮತ್ತು 3 ಎಂದು ವಿಚಾರಣೆ ಮಾಡಿರುತ್ತಾರೆ. ಆದರೆ ಅವರು ತಮ್ಮ ವಿಚಾರಣೆಯಲ್ಲಿ ಅಭಿಯೋಜನೆಗೆ ಪ್ರತಿಕೂಲವಾಗಿ ಸಾಕ್ಷಿ ನುಡಿದಿರುತ್ತಾರೆ. ಹೀಗಾಗಿ ಇವರ ಸಾಕ್ಷಿಯಿಂದ ಮಾತ್ರ ಆರೋಪಿ ತಪ್ಪಿತಸ್ಥ ಎಂದು ನಿರ್ಣಯಿಸಲು ಆಗುವುದಿಲ್ಲ.

13. ಈ ಪ್ರಕರಣದ ಸಾಕ್ಷಿ ಪ್ರಾಸಾ-1 ಆನಂದಮೂರ್ತಿ ಹಾಗೂ ಪ್ರಾಸಾ-3 ಯಲ್ಲಪ್ಪರವರ ಸಾಕ್ಷಿಯನ್ನು ಪರಿಗಣಿಸಿದಾಗ ಇವರು ನಿಪಿ-1 ಪಂಚನಾಮೆಯ

ಪಂಚಸಾಕ್ಷಿಗಳಾಗಿದ್ದು ತಮ್ಮ ವಿಚಾರಣೆಯಲ್ಲಿ ಅಭಿಯೋಜನೆಗೆ ಸಂಪೂರ್ಣವಾಗಿ ಪ್ರತಿಕೂಲವಾಗಿ ಸಾಕ್ಷಿ ನುಡಿದಿರುತ್ತಾರೆ. ಅವರು ತಮ್ಮ ವಿಚಾರಣೆಯಲ್ಲಿ ನ್ಯಾಯಾಲಯದ ಮುಂದೆ ಇರುವ ಆರೋಪಿ ಗೊತ್ತಿಲ್ಲ. ಪೊಲೀಸರು ನನ್ನ ಸಮಕ್ಷಮ ಮಹಜರ್ ಮಾಡಿಲ್ಲ. ಪೊಲೀಸರಿಗೆ ನಾನು ಹೇಳಿಕೆ ನೀಡಿಲ್ಲ ಎಂದು ನುಡಿದಿರುತ್ತಾರೆ.

14. ಮಾನ್ಯ ಎ.ಪಿ.ಪಿ ರವರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ತಮ್ಮ ಪಾಟೀಸಾಲಿನಲ್ಲಿ ದಿನಾಂಕಃ 22.03.2020 ರಂದು ಚಿ.ನಾ ಹಳ್ಳಿ ತಾಲ್ಲೂಕು ಹಂದನಕೆರೆ ಹೋಬಳಿ ಸಾಲಮನೆಪಾಳ್ಯ ಗೇಟ್ ನಿಂದ ಮುಂದೆ ಇರುವ ಆರೋಪಿ ರಮೇಶ್ ರವರ ಮಾವನಾದ ನಾಗರಾಜಯ್ಯ ರವರ ತೋಟದ ಮನೆ ಕೆಳಗೆ ನನ್ನ ಮತ್ತು ಚಾಸಾ 1 ಮತ್ತು 2 ರವರ ಸಮಕ್ಷಮ ಪಂಚನಾಮ ಕ್ರಮ ಜರುಗಿಸಿದರು, ಸದರಿ ಪಂಚನಾಮೆಯಲ್ಲಿ ಐವರ್ಡ್ ಕಂಪನಿಯ 90 ಎಂ ಎಲ್ ನ 460 ಟೆಟ್ರಾ ಪ್ಯಾಕೇಟುಗಳು, ರಾಜಾ ವಿಸ್ಕಿ ಕಂಪನಿಯ 90 ಎಂ ಎಲ್ ನ 96 ಟೆಟ್ರಾ ಪ್ಯಾಕೇಟುಗಳು, ಬ್ಯಾಕ್ ಪೈಪರ್ ಕಂಪನಿಯ 180 ಎಂ ಎಲ್ 80 ಟೆಟ್ರಾ ಪ್ಯಾಕೇಟುಗಳು, ನಾಕಾಔಟ್ ಕಂಪನಿಯ 330 ಎಂ ಎಲ್ ನ 24 ಟಿನ್ ಗಳನ್ನು ಪೊಲೀಸರು ತಮ್ಮ ವಶಕ್ಕೆ ಪಡೆದರು, ಸದರಿ ಪಂಚನಾಮೆಯನ್ನು ಅದೇ ದಿನ ಮದ್ಯಾಹ್ನ 12.15-1.30 ರವರೆಗೆ ಜರುಗಿಸಿದರು, ದಿನಾಂಕಃ 22.03.2020 ರಂದು ನಾನು ಮತ್ತಿಗಟ್ಟ ಗ್ರಾಮ ಪಂಚಾಯ್ತಿಯ ನಾಡಕಚೇರಿಯ ಬಳಿ ಸಿದ್ದಾರಾಮಯ್ಯರೊಂದಿಗೆ ಮಾತನಾಡುತ್ತಿದ್ದಾಗ ಹಂದನಕೆರೆ ಪೊಲೀಸರು ನನ್ನ ಪೊಲೀಸ್ ಸಬ್ ಇನ್ಸ್ ಪೆಕ್ಟರ್ ಶಿವಕುಮಾರ್ ಚಾಸಾ 15 ರವರು ನನ್ನನ್ನು ಪೊಲೀಸ್ ಠಾಣೆಗೆ ಕರೆಯಿಸಿಕೊಂಡು ನನಗೆ ಸಾಲಮನೆ ಗೇಟ್ ಬಳಿ ಮುಂದೆ ಇರುವ ದೊಡ್ಡ ಪಾಳ್ಯದ ನಾಗರಾಜು ರವರು ತೋಟದ ಮನೆಯಲ್ಲಿ ಆರೋಪಿಯು ಅಕ್ರಮವಾಗಿ ಮಧ್ಯ ಮಾರಾಟ ಮಾಡಲ ಶೇಖರಣೆ ಮಾಡಿದ್ದು ಬಾತ್ಮಿ ದಾರರಿಂದ ಬಂದ ಖಚಿತ ಮಾಹಿತಿಯ ಮೇರೆಗೆ ಮಧ್ಯ ಮಾರಾಟ ಮಾಡುವ ಸ್ಥಳದ ಮೇಲೆ ದಾಳಿ ಮಾಡಲು ಅದರ ಸಲುವಾಗಿ ನೀವು ನಮ್ಮೊಂದಿಗೆ ಪಂಚರಾಗಿ ಬರಬೇಕೆಂದು ಕೇಳಿಕೊಂಡ ಮೇರೆಗೆ ಅದಕ್ಕೆ ಒಪ್ಪಿಕೊಂಡು ಪೊಲೀಸರೊಂದಿಗೆ ಅಕ್ರಮವಾಗಿ ಮಧ್ಯಮ ಮಾರಾಟ ಮಾಡುವ ಸ್ಥಳಕ್ಕೆ ಹೋದೆವು, ಬೆಳಗ್ಗೆ 11.30 ಗಂಟೆಯಲ್ಲಿ ಹಂದನಕೆರೆಯಿಂದ ಹೊರಟು ಮತ್ತಿಗಟ್ಟ ಗ್ರಾಮದ ಮಾರ್ಗವಾಗಿ ಸಾಲುಮನೆ ಪಾಳ್ಯದ ಹೋಗುವ ರಸ್ತೆಯಲ್ಲಿ ಸುಮಾರು ಅರ್ಧ ಕೀ.ಮಿ., ದೂರ ಬಂದಾಗ ಜೀಪ್ ಅನ್ನು ನಿಲ್ಲಿಸಿ ಅಲ್ಲಿಂದ

ನಡೆದುಕೊಂಡು ಹೋದಾಗ ಒಂದು ಸೀಟಿನ ಮನೆಯಲ್ಲಿ ಸುಮಾರು 3-4 ಜನರು ಹೋಗುತ್ತಿದ್ದು ಮನೆಯ ಬಳಿ ಹೋಗಿ ನೋಡಲಾಗಿ ಆರೋಪಿ ರಮೇಶ್ ರವರು ಇದ್ದರು, ಆರೋಪಿ ಅಡುಗೆ ಮನೆ ಕೋಣೆಯಲ್ಲಿ ಮದ್ಯವನ್ನು ಸಂಗ್ರಹಿಸಿಕೊಂಡಿದ್ದು ಅದನ್ನು ಮಾರಾಟ ಮಾಡುತ್ತಿದ್ದು ಅವುಗಳನ್ನು ಪರೀಶಿಲಿಸಲಾಗಿ ಐವರ್ಡ್ ಕಂಪನಿಯ 90 ಎಂ ಎಲ್ ನ 460 ಟೆಟ್ರಾ ಪ್ಯಾಕೇಟುಗಳು, ರಾಜಾ ವಿಸ್ಕಿ ಕಂಪನಿಯ 90 ಎಂ ಎಲ್ ನ 96 ಟೆಟ್ರಾ ಪ್ಯಾಕೇಟುಗಳು, ಬ್ಯಾಕ್ ಪೈಪರ್ ಕಂಪನಿಯ 180 ಎಂ ಎಲ್ 80 ಟೆಟ್ರಾ ಪ್ಯಾಕೇಟುಗಳು, ನಾಕಾಔಟ್ ಕಂಪನಿಯ 330 ಎಂ ಎಲ್ ನ 24 ಟಿನ್ ಗಳು ಇದ್ದವು, ಇವುಗಳನ್ನು ಮುಂದಿನ ತನಿಖೆಗಾಗಿ ಪೊಲೀಸರ ತಮ್ಮ ವಶಕ್ಕೆ ಪಡೆದು ಅವುಗಳನ್ನು ಪ್ರತ್ಯೇಕವಾಗಿ ಒಂದು ಬಿಳಿ ಚೀಲದಲ್ಲಿ ಹಾಕಿ ಬಾಯನ್ನು ಕಟ್ಟಿ ಹೆಚ್ 'ಎಂ' ಅಕ್ಷರದಿಂದ ಸೀಲು ಮಾಡಿ ಪೊಲೀಸರು ತಮ್ಮ ವಶಕ್ಕೆ ಪಡೆದರು ಎಂದು ಸೂಚಿಸಿದರು ಅಭಿಯೋಜನೆಗೆ ಸಹಾಯವಾಗುವಂತಹ ಯಾವುದೇ ಅಂಶಗಳನ್ನು ಹೇಳಿರುವುದಿಲ್ಲ. ಇವರ ಈ ಸಾಕ್ಷಿಯಿಂದ ಅಭಿಯೋಜನೆಯು ನಿಪಿ.1 ಪಂಚನಾಮೆಯ ಅಂಶವನ್ನು ರುಜುವಾತುಪಡಿಸಲು ವಿಫಲವಾಗಿದೆ ಎಂದು ಹೇಳಬಹುದಾಗಿದೆ.

15. ಈ ಪ್ರಕರಣದ ಸಾಕ್ಷಿ ಪ್ರಾಸಾ-4 ಕೃಷ್ಣಪ್ಪರವರ ಸಾಕ್ಷಿಯನ್ನು ಪರಿಗಣಿಸಿದಾಗ ಇವರು ಘಟನೆಯ ಪ್ರತ್ಯಕ್ಷ ಸಾಕ್ಷಿಯಾಗಿದ್ದು ತಮ್ಮ ವಿಚಾರಣೆಯಲ್ಲಿ ಅಭಿಯೋಜನೆಗೆ ಪೂರಕವಾಗಿ ಸಾಕ್ಷಿಯನ್ನು ನುಡಿದಿರುತ್ತಾರೆ. ಇವರು ತಮ್ಮ ಸಾಕ್ಷಿಯಲ್ಲಿ ದಿನಾಂಕ 22.03.2020 ರಂದು ಚಿಕ್ಕನಾಯಕನಹಳ್ಳಿ ವೃತ್ತ ನಿರೀಕ್ಷಕರಾದ ಚಾಸಾ-1 ರವರು ದೊಡ್ಡಪಾಳ್ಯದ ನಾಗರಾಜಯ್ಯ ತೋಟದ ಮನೆಯಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದಾರೆ ಎಂದು ಬಾತ್ಮಿ ಬಂದಿದೆ ದಾಳಿ ಮಾಡಬೇಕು ಎಂದು ನನ್ನನ್ನು ಹಾಗೂ ನಮ್ಮ ಸಿಬ್ಬಂದಿಯಾವರಾದ ಚಾಸಾ-4 ರಿಂದ 6 ಹಾಗೂ 9 ರವರನ್ನು ಕರೆದುಕೊಂಡು ಮೊದಲು ಘಟನಾ ಸ್ಥಳ ಹಂದನಕೆರೆ ಠಾಣೆಗೆ ಬರುವುದರಿಂದ ಚಾಸಾ-1 ರವರು ಹಂದನಕೆರೆ ಠಾಣೆಗೆ ಕರೆದುಕೊಂಡು ಹೋದರು. ಅಲ್ಲಿ ಪಿ ಎಸ್ ಐ ರವರಾದ ಚಾಸಾ-15 ರವರನ್ನು ಜೀಪು ಚಾಲಕ ಚಾಸಾ-10, ಸಿಬ್ಬಂದಿಯಾದ ಚಾಸಾ-7 ರವರನ್ನು ಕರೆದುಕೊಂಡು ಠಾಣೆಯ ಪಕ್ಕದಲ್ಲಿರುವ ನಾಡಕಚೇರಿ ಬಳಿ ಇಬ್ಬರು ಪಂಚರವನ್ನು ಬರಮಾಡಿಕೊಂಡು ಬೆಳಗ್ಗೆ 08.30 ಕ್ಕೆ ಘಟನಾ ಸ್ಥಳಕ್ಕೆ ಹೋದೆವು. ಮೊದಲು ನಾವು ಸಲುಮನೆಪಾಳ್ಯದ ಬಳಿ ಎರಡು

ಜೀಪುಗಳನ್ನು ಅಲ್ಲಿಯೆ ನಿಲ್ಲಿಸಿ ನಡೆದುಕೊಂಡು ಘಟನಾ ಸ್ಥಳಕ್ಕೆ ಹೋದೆವು. ಅರ್ಧ ಕೀ.ಮಿ., ನಡೆದುಕೊಂಡು ಹೋದ ನಂತರ ದೊಡ್ಡಪಾಳ್ಯದ ತೋಟದ ಮನೆಯ ಬಳಿ ನೋಡಿದಾಗ 3-4 ಜನ ಓಡಾಡುತ್ತಿದ್ದರು. ಆರೋಪಿ ಮನೆಯ ಒಳಗೆ ಇದ್ದರು. ಚಾಸಾ-1 ರವರು ದಾಳಿ ಮಾಡಲಾಗಿ ಆರೋಪಿಯ ಅಡುಗೆ ಮನೆಯಲ್ಲಿ ರೊಟ್ಟಿನ ಬಾಕ್ಸ್ ಗಳಲ್ಲಿ ಮದ್ಯ ಇತ್ತು. ಚಾಸಾ-1 ರವರು ಅವುಗಳನ್ನು ಮಾರಾಟ ಮಡಲು ಪರವನಾಗಿ ಇದೆಯೇ ಎಂದು ಆರೋಪಿಗೆ ಕೇಳಿದರು. ಆರೋಪಿ ಯಾವುದೇ ಪರವನಾಗಿ ಇಲ್ಲ ಎಂದು ಹೇಳಿದರು. ನಂತರ ಆರೋಪಿಯನ್ನು ವಿಚಾರಿಸಲಾಗಿ ಆತನ ಹೆಸರು ರಮೇಶ್ ತಂದೆ ಬಸವರಾಜು ಎಂದು ಹೇಳಿದರು. ಮನೆ ಆರೋಪಿಯ ಸಂಬಂಧಿಕರದು, ಅವರಿಗೆ ನೋಡಿಕೊಳ್ಳಲು ಆಗುವುದಿಲ್ಲ ಎಂದು ನನಗೆ ಕೊಟ್ಟಿರುತ್ತಾರೆ ಎಂದು ಹೇಳಿದರು, ನಂತರ ಮದ್ಯವನ್ನು ಪಂಚರ ಸಮಕ್ಷಮ ಪರೀಶಿಲಿಸಿ ಪಂಚನಾಮೆ ಮಾಡಿ ಜಪ್ತಿ ಮಾಡಿಕೊಂಡರು. ರಾಸಾಯನಿಕ ಪರೀಕ್ಷೆಗೆ ಕಳುಹಿಸುವ ಸಲುವಾಗಿ ಎಲ್ಲಾ ವಿಧದ ಒಂದು ಮದ್ಯದ ಟೆಟ್ರಾ ಪ್ಯಾಕೇಟ್ ಗಳನ್ನು ಹಾಗೂ ಟಿನ್ ಗಳನ್ನು ಪ್ರತ್ಯೇಕವಾಗಿ ತೆಗೆದು ಬಳಿ ಬಟ್ಟೆಯಲ್ಲಿ ಹಾಕಿ ಸೀಲು ಮಾಡಿದರು. ನಂತರ ಸ್ಥಳದಲ್ಲಿ ಮಹಜರ್ ಬರೆದರು. ಹೇವರ್ಡ್ಸ್ ಕಂಪನಿಯ 90 ಎಂ ಎಲ್ ನ 460 ಟೆಟ್ರಾ ಪ್ಯಾಕೇಟ್ ಗಳು ಇದ್ದು, ರಾಜಾ ವಿಸ್ಕಿ ಕಂಪನಿಯ 90 ಎಂ ಎಲ್ ನ 96 ಟೆಟ್ರಾ ಪ್ಯಾಕೇಟ್ ಗಳು ಇದ್ದು, ಬ್ಯಾಕ್ ಪೈಪರ್ ಕಂಪನಿಯ 180 ಎಂ ಎಲ್ ನ 80 ಟೆಟ್ರಾ ಪ್ಯಾಕೇಟ್ ಗಳು ಇದ್ದವು. ನಂತರ ನಾಕ್ ಔಟ್ ಕಂಪನಿಯ 330 ಎಂ ಎಲ್ ನ 24 ಟನ್ ಗಳು ಇವುಗಳ ಒಟ್ಟು ಬೆಲೆ ಸುಮಾರು ರೂ.26500/- ಜಪ್ತಿ ಮಾಡಿಕೊಂಡಿರುತ್ತೇವೆ. ಮಹಜರ್ ಅನ್ನು ಮದ್ಯಾಹ್ನ 12.15 ರಿಂದ 01.30 ರವರೆಗೆ ಜರುಗಿಸಿದರು. ಪಂಚರಾಗಿ ಆನಂದಮೂರ್ತಿ, ಯಲ್ಲಪ್ಪ ಬರಣಾಪುರ ಎಂಬುವವರು ಸಹಿ ಮಾಡಿರುತ್ತಾರೆ. ನಮ್ಮ ಸಿಬ್ಬಂದಿ ಸಹ ಸಹಿ ಮಾಡಿರುತ್ತಾರೆ. ನಮ್ಮ ಸಾಹೇಬರಿಗೆ ನಾನು ಹೇಳಿಕೆ ಕೊಟ್ಟಿರುತ್ತೇನೆ ಎಂದು ನುಡಿದು ಪಂಚನಾಮೆಯಲ್ಲಿ ತಮ್ಮ ಸಹಿಯನ್ನು ಗುರುತಿಸಿ, ಆರೋಪಿಯನ್ನು ನ್ಯಾಯಾಲಯದ ಮುಂದೆ ಗುರುತಿಸಿರುತ್ತಾರೆ.

16. ಪ್ರಾಸಾ-4 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಅಭಿಯೋಜನೆಗೆ ಪೂರಕವಾಗಿ ಸಾಕ್ಷಿ ನುಡಿದಿದ್ದರೂ ಇವರ ಸಾಕ್ಷಿಯಿಂದ ಮಾತ್ರ ಆರೋಪಿ ತಪ್ಪಿತಸ್ಥ ಎಂದು

ನಿರ್ಣಯಿಸಲಾಗುವುದಿಲ್ಲ. ಏಕೆಂದರೆ ಪಂಚಸಾಕ್ಷಿಗಳಾದ ಪ್ರಾಸಾ-1 ಮತ್ತು 3 ಅಭಿಯೋಜನೆಗೆ ಪ್ರತಿಕೂಲವಾಗಿ ಸಾಕ್ಷಿ ನುಡಿದಿರುತ್ತಾರೆ. ಇತರೆ ಸಾಕ್ಷಿಗಳು ಪೊಲೀಸ್ ಅಧಿಕಾರಿ ಹಿತಾಸಕ್ತಿ ಹೊಂದಿದ ಸಾಕ್ಷಿಗಳಾಗಿರುತ್ತಾರೆ.

17. ಈ ಪ್ರಕರಣದ ಸಾಕ್ಷಿ ಪ್ರಾಸಾ-5 ನಾಗರಾಜುರವರು ಸಾಕ್ಷಿಯನ್ನಾಗಿ ಪರಿಗಣಿಸಿದಾಗ ಇವರು ಗುಡಿಸಲು ಇರುವ ಜಮೀನಿನ ಮಾಲೀಕರಾಗಿದ್ದು ತಮ್ಮ ಸಾಕ್ಷಿಯಲ್ಲಿ ಅಭಿಯೋಜನೆ ಸಂಪೂರ್ಣವಾಗಿ ಪ್ರತಿಕೂಲವಾಗಿ ಸಾಕ್ಷಿ ನುಡಿದಿರುತ್ತಾರೆ. ಇವರು ತಮ್ಮ ಸಾಕ್ಷಿಯಲ್ಲಿ ನಾನು ಆರೋಪಿಯನ್ನು ನೋಡಿರುವುದಿಲ್ಲ. ದೊಡ್ಡಪಾಳ್ಯ ಗ್ರಾಮದಲ್ಲಿ ಮೂರು ಗುಂಟೆ ಜಮೀನು ಇರುತ್ತದೆ. ಸದರಿ ಜಮೀನಿನಲ್ಲಿ ಒಂದು ಗುಡಿಸಲು ಇರುತ್ತದೆ. ನನ್ನ ತಂಗಿ ಕರಿಯಮ್ಮನ ನನ್ನ ಗಂಡ ಮೃಪಟ್ಟಿದ್ದರು. ಹೀಗಾಗಿ ಸದರಿ ಗುಡಿಸಿನಲ್ಲಿ ಅವರು ವಾಸವಿದ್ದರು. ನನಗೆ ಈ ಪ್ರಕರಣದ ಬಗ್ಗೆ ಏನು ಗೊತ್ತಿರುವುದಿಲ್ಲ. ಪೊಲೀಸರು ನನ್ನನ್ನು ವಿಚಾರಣೆ ಮಾಡಿರುವುದಿಲ್ಲ. ನಾನು ಅವರಿಗೆ ಹೇಳಿಕೆ ಕೊಟ್ಟಿರುವುದಿಲ್ಲ ಎಂದು ನುಡಿದಿರುತ್ತಾರೆ.

18. ಮಾನ್ಯ ಎ.ಪಿ.ಪಿ ರವರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ತಮ್ಮ ಪಾಟೀಸಾಲಿನಲ್ಲಿ ನನಗೆ ಮರುಳಯ್ಯ ಮತ್ತು ಕವಿತಾ ಎಂಬ ಇಬ್ಬರು ಹೆಣ್ಣುಮಕ್ಕಳಿದ್ದು ನಾನು ನನ್ನ ಮಗನೊಂದಿಗೆ ವ್ಯವಸಾಯ ಮಾಡಿಕೊಂಡು ದೊಡ್ಡಪಾಳ್ಯ ಗ್ರಾಮದಲ್ಲಿ ವಾಸವಾಗಿರುತ್ತೇನೆ. ನನ್ನ ಮಗಳನ್ನು ಕೋಡಿಪಾಳ್ಯದ ರಮೇಶನಿಗೆ ಕೊಟ್ಟು ಮದುವೆ ಮಾಡಿರುತ್ತೇನೆ, ನನ್ನ ಎಲ್ಲಾ ಜಮೀನುಗಳು ನನ್ನ ಹೆಸರಿನಲ್ಲಿ ಇದ್ದು ಇದರಲ್ಲಿ ನನ್ನ ಬಾಬ್ತು ಸಾಲುಮನೆ ಪಾಳ್ಯದ ಹತ್ತಿರ ಇರುವ ಮಲ್ಲಿಗೆರೆ ಸರ್ವೆ ನಂಬರ್ 382/1 ರಲ್ಲಿ ಮೂರು ಗುಂಟೆ ಜಮೀನು ಇದ್ದು ಇದರಿಲ್ಲಿ ಒಂದು ಹಳೆಯ ಮನೆ ಇದೆ, ಹಿಗ್ಗೆ ಸ್ವಲ್ಪ ದಿನಗಳಿಂದ ನನ್ನ ಜಮೀನನ್ನು ನನ್ನ ಮಗಳ ಗಂಡನಾದ ಆರೋಪಿ ನನಗೆ ವಯಸ್ಸಾಗಿದ್ದರಿಂದ ನೋಡಿಕೊಳ್ಳುತ್ತಿದ್ದರು, ಅಲ್ಲಿ ಆರೋಪಿ ಮದ್ಯವನ್ನು ಇಟ್ಟುಕೊಂಡು ಮಾರಾಟ ಮಾಡುತ್ತಿದ್ದರು ಎಂದು ತಿಳಿದು ಬಂತು, ಆಗ ನಾನು ಆರೋಪಿಗೆ ಬುದ್ದಿವಾದ ಹೇಳಿ ಅವರು ಈ ರೀತಿ ಯಾವುದೇಕೆಲಸ ಮಾಡುತ್ತಿಲ್ಲ ಎಂದು ನನಗೆ ಸಮಜಾಯಿಷಿ ಕೊಟ್ಟಿದ್ದರು, ದಿನಾಂಕ 22.03.2020 ರಂದು ಹಂದನಕೆರೆ ಪೊಲೀಸರು ನನ್ನ ಜಮೀನಿನ ಬಳಿ ಬಂದು ಆರೋಪಿ ಅಕ್ರಮವಾಗಿ ಯಾವುದೇ ಪರವಾನಗಿ ಪಡೆಯದೆ ಮದ್ಯವನ್ನು

ಮಾರಾಟ ಮಾಡುವ ಸಲುವಾಗಿ ಸಂಗ್ರಹಿಸಿ ಇಟ್ಟಿದ್ದು ಮದ್ಯದ ಮೇಲೆ ದಾಳಿ ಮಾಡಿ ಆರೋಪಿ ಮತ್ತು ಮದ್ಯವನ್ನು ವಶಪಡಿಸಿಕೊಂಡು ಮುಂದಿನ ಕ್ರಮ ಜರುಗಿಸಿದರು ಎಂದು ಸೂಚಿಸಿದರು ಅಭಿಯೋಜನೆಗೆ ಸಹಾಯವಾಗುವಂತ ಯಾವುದೇ ಅಂಶಗಳನ್ನು ಹೇಳಿರುವುದಿಲ್ಲ. ಇವರ ಸಾಕ್ಷಿಯಿಂದ ಪ್ರಮುಖ ಸಾಕ್ಷಿ ಅಭಿಯೋಜನೆಯ ಪ್ರಕರಣವನ್ನು ಸಹಕರಿಸಿರುವುದಿಲ್ಲ ಎಂದು ಹೇಳಬಹುದಾಗಿದೆ.

19. ಈ ಪ್ರಕರಣದ ಸಾಕ್ಷಿಯು ಪ್ರಾಸಾ-6 ಕುಮಾರ್ ರವರ ಸಾಕ್ಷಿಯನ್ನು ಪರಿಗಣಿಸಿದಾಗ ಇವರು ಗ್ರಾಮ ಲೆಕ್ಕಾಧಿಕಾರಿಯಾಗಿದ್ದು ಗುಡಿಸಲು ಇರುವ ಜಮೀನು ಸ.ನಂ.382/1ರ ಬಗ್ಗೆ ಪಹಣಿಯನ್ನು ಕೊಟ್ಟು ವರದಿಮಾಡಿರುವ ಬಗ್ಗೆ ನುಡಿಯುತ್ತಾರೆ. ಆದರೆ ಇವರ ಸಾಕ್ಷಿಯಿಂದ ಮಾತ್ರ ಆರೋಪಿ ತಪ್ಪಿತಸ್ಥ ಎಂದು ನಿರ್ಣಯಿಸಲಾಗುವುದಿಲ್ಲ.

20. ಈ ಪ್ರಕರಣದ ಸಾಕ್ಷಿ ಪ್ರಾಸಾ-7 ರಿಂದ 9 ರವರ ಸಾಕ್ಷಿಯನ್ನು ಪರಿಗಣಿಸಿದಾಗ ಇವರು ಪಿ.ಎಸ್.ಐ ಹಂದನಕೆರೆ ಪೊಲೀಸ್ ಠಾಣೆ ಹಾಗೂ ಈ ಪ್ರಕರಣದ ತನಿಖಾಧಿಕಾರಿಗಳು ಆಗಿದ್ದು ತಮ್ಮ ವಿಚಾರಣೆಯಲ್ಲಿ ಈ ಪ್ರಕರಣಲ್ಲಿ ತನಿಖೆ ಮಾಡಿದ ಬಗ್ಗೆ ವಿವರವಾಗಿ ನೀಡಿರುತ್ತಾರೆ. ಆದರೆ ಇವರ ಸಾಕ್ಷಿಯಿಂದ ಮಾತ್ರ ಆರೋಪಿತರು ತಪ್ಪಿತಸ್ಥರು ಎಂದು ನಿರ್ಣಯಿಸಲು ಆಗುವುದಿಲ್ಲ. ಏಕೆಂದರೆ ಇವರ ಸಾಕ್ಷಿಯನ್ನು ಪುಷ್ಟಿಕರಿಸಲು ಪಂಚಸಾಕ್ಷಿಗಳು ಅಭಿಯೋಜನೆಯ ಪ್ರಕರಣವನ್ನು ಸಹಕರಿಸಿರುವುದಿಲ್ಲ. ಪೋಲಿಸರ ಸಾಕ್ಷಿ ಹೊರತುಪಡಿಸಿ ಇತರೆ ಪ್ರತ್ಯೇಕ ಸಾಕ್ಷಿ ಇರುವುದಿಲ್ಲ.

21. ಅಭಿಯೋಜನೆಯು ಆರೋಪಿ ವಿರುದ್ಧ ಹೊರಿಸಲಾದ ಅಪರಾಧವನ್ನು ನಿಸ್ಸಂದೇಹವಾಗಿ ರುಜುವಾತು ಪಡಿಸಲು ವಿಫಲವಾಗಿರುತ್ತದೆ. ಪಿರ್ಯಾದಿದಾರರು ಹಾಗೂ ಪ್ರಾಸಾ-6 ರವರು ಅಭಿಯೋಜನೆಗೆ ಪೂರಕವಾಗಿ ಸಾಕ್ಷಿ ನುಡಿದಿದ್ದರೂ ಅವರ ಸಾಕ್ಷಿಯನ್ನು ಪುಷ್ಟಿಕರಿಸಲು ಪಂಚಸಾಕ್ಷಿಗಳು ಅಭಿಯೋಜನೆಯ ಪ್ರಕರಣವನ್ನು ಸಹಕರಿಸಿರುವುದಿಲ್ಲ, ಪಂಚಸಾಕ್ಷಿಗಳಾದ ಪ್ರಾಸಾ-1 ಮತ್ತು 3 ರವರು ಅಭಿಯೋಜನೆಗೆ ಸಂಪೂರ್ಣವಾಗಿ ಪ್ರತಿಕೂಲವಾಗಿ ಸಾಕ್ಷಿ ನುಡಿದಿರುತ್ತಾರೆ. ತನಿಖಾಧಿಕಾರಿಗಳು ಮತ್ತು ಪೋಲಿಸರ ಸಾಕ್ಷಿ ಹೊರತುಪಡಿಸಿ ಆರೋಪಿಗಳ ವಿರುದ್ಧ ಪ್ರತ್ಯೇಕ ಸಾಕ್ಷಿ ಇರುವುದಿಲ್ಲ. ಈ ಎಲ್ಲಾ ಕಾರಣಗಳಿಂದ ಅಭಿಯೋಜನೆಯು ಆರೋಪಿ ವಿರುದ್ಧ ಹೊರಿಸಲಾದ ಅಪರಾಧವಾನ್ನು

ನಿಸ್ಸಂದೇಹವಾಗಿ ರುಜುವಾತು ಪಡಿಸಲು ವಿಫಲವಾಗಿದೆ ಎಂದು ನಾನು ಅಂಶ-1 ನ್ನು ನಕಾರಾತ್ಮಕವಾಗಿ ಉತ್ತಸಿರುತ್ತೇನೆ.

22. **ಅಂಶ ನಂ.2**:- ಈ ಮೇಲಿನ ಕಾರಣ ಮತ್ತು ವಿವರಣೆಗಳಿಗಾಗಿ ಈ ಕೆಳಗಿನಂತೆ ಮಾಡಿದ:

## ಆದೇಶ

ದಂಡ ಪ್ರಕ್ರಿಯಾ ಸಂಹಿತೆ ಕಲಂ.248(1) ರ ಅಡಿಯಲ್ಲಿ ವರ್ತಿಸುತ್ತಾ ಆರೋಪಿಯು ಅಬಕಾರಿ ಕಾಯ್ದೆ ಕಲಂ.32 ಮತ್ತು 34 ರ ಅಡಿಯಲ್ಲಿ ಹೊರಿಸಲಾದ ಆರೋಪಕ್ಕೆ ಆರೋಪಿತ ತಪ್ಪಿತಸ್ಥನಲ್ಲವೆಂದು ಬಿಡುಗಡೆ ಮಾಡಲಾಗಿದೆ.

ಆರೋಪಿ ಮತ್ತು ಅವರ ಜಾಮೀನುದಾರರ ಮುಚ್ಚಳಿಕೆಯನ್ನು ರದ್ದು ಮಾಡಲಾಗಿದೆ.

ಜಪ್ತಿ ಮಾಡಿಕೊಂಡ ಎಂ.ಓ-1 ರಿಂದ 4 ಮದ್ಯದ ಪ್ಯಾಕೆಟ್ ಬೆಲೆ ಬಾಳದ ವಸ್ತು ಆದ್ದರಿಂದ ಮೇಲ್ಮನವಿ ಅವಧಿ ಮುಗಿದ ನಂತರ ನಾಶ ಮಾಡಲು ಆದೇಶಿಸಲಾಗಿದೆ.

(ಶೀಘ್ರಲಿಪಿಗಾರರಿಗೆ ಗಣಕ ಯಂತ್ರದಲ್ಲಿ ನೇರವಾಗಿ ಉಕ್ತಲೇಖನ ನೀಡಿದ್ದು, ಸೂಕ್ತ ತಿದ್ದುಪಡಿಯ ನಂತರ ದಿನಾಂಕ 18ನೇ ಜೂನ್ ಮಾಹೆ 2026 ರಂದು ತೀರ್ಪನ್ನು ತೆರೆದ ನ್ಯಾಯಾಲಯದಲ್ಲಿ ಉದ್ಘೋಷಿಸಲಾಯಿತು)

**(ಸತೀಶ್.ಎಸ್.ಟಿ.)**
ಹಿರಿಯ ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.,
ಚಿಕ್ಕನಾಯಕನಹಳ್ಳಿ.

## ಅನುಬಂಧ

1. **ಅಭಿಯೋಜನೆ ಪರ ವಿಚಾರಣೆಗೆ ಒಳ ಪಟ್ಟ ಸಾಕ್ಷಿಗಳ ಪಟ್ಟಿ** :-

| | | |
|---|---|---|
| ಪ್ರಾಸಾ-1 | : | ಆನಂದಮೂರ್ತಿ |
| ಪ್ರಾಸಾ-2 | : | ವೀಣಾ |
| ಪ್ರಾಸಾ-3 | : | ಯಲ್ಲಪ್ಪ |

| | | |
|---|---|---|
| ಪ್ರಾಸಾ-4 | : | ಕೃಷ್ಣ |
| ಪ್ರಾಸಾ-5 | : | ನಾಗರಾಜು |
| ಪ್ರಾಸಾ-6 | : | ಕುಮಾರ್ |
| ಪ್ರಾಸಾ-7 | : | ಶಿವಕುಮಾರ್ |
| ಪ್ರಾಸಾ-8 | : | ಕೃಷ್ಣಪ್ಪ |
| ಪ್ರಾಸಾ-9 | : | ಯೋಗೀಶ್ |

2. **ಅಭಿಯೋಜನೆ ಪರ ನಿಶಾನೆಗಳಾಗಿ ಗುರುತಿಸಲ್ಪಟ್ಟ ದಾಖಲೆಗಳ ಪಟ್ಟಿ** :-

| | | |
|---|---|---|
| ನಿ.ಪಿ.1 | : | ಜಪ್ತಿ ಮಹಜರ್ |
| ನಿ.ಪಿ.1(ಎ) | : | ಸಾಕ್ಷಿಯ ಸಹಿ |
| ನಿ.ಪಿ.1(ಬಿ) | : | ಸಾಕ್ಷಿಯ ಸಹಿ |
| ನಿ.ಪಿ.2 | : | ಪಿರ್ಯಾದು |
| ನಿ.ಪಿ.2(ಎ) | : | ಸಾಕ್ಷಿಯ ಸಹಿ |
| ನಿ.ಪಿ.2(ಬಿ) | : | ಸಾಕ್ಷಿಯ ಸಹಿ |
| ನಿ.ಪಿ.2(ಸಿ) | : | ಸಾಕ್ಷಿಯ ಸಹಿ |
| ನಿ.ಪಿ.2(ಡಿ) | : | ಸಾಕ್ಷಿಯ ಸಹಿ |
| ನಿ.ಪಿ.3 | : | ಹೇಳಿಕೆ |
| ನಿ.ಪಿ.4 | : | ಗ್ರಾಮಲೆಕ್ಕಾಧಿಕಾರಿ ವರದಿ |
| ನಿ.ಪಿ.4(ಎ) | : | ಸಾಕ್ಷಿಯ ಸಹಿ |
| ನಿ.ಪಿ.5 | : | ಮಹಜರ್ |
| ನಿ.ಪಿ.5(ಎ) | : | ಸಾಕ್ಷಿಯ ಸಹಿ |
| ನಿ.ಪಿ.6 | : | ಪಹಣಿ ಪತ್ರಿಕೆ |
| ನಿ.ಪಿ.7 | : | ಎಫ್.ಐ.ಆರ್ |
| ನಿ.ಪಿ.7(ಎ) | : | ಸಾಕ್ಷಿಯ ಸಹಿ |
| ನಿ.ಪಿ.8 | : | ಆನಂದಮೂರ್ತಿರವರ ಹೇಳಿಕೆ |
| ನಿ.ಪಿ.8(ಎ) | : | ಸಾಕ್ಷಿಯ ಸಹಿ |
| ನಿ.ಪಿ.9 | : | ಮದ್ಯವನ್ನು ಅಧಿಕಾರಿಗೆ ಕೊಟ್ಟ ಪತ್ರ |
| ನಿ.ಪಿ.9(ಎ) | : | ಸಾಕ್ಷಿಯ ಸಹಿ |
| ನಿ.ಪಿ.10 | : | FSL ವರದಿ |
| ನಿ.ಪಿ.10(ಎ) | : | ಸಾಕ್ಷಿಯ ಸಹಿ |
| ನಿ.ಪಿ.11 | : | ತಹಸೀಲ್ದಾರ್ ರವರ ವರದಿ |
| ನಿ.ಪಿ.11(ಎ) | : | ಸಾಕ್ಷಿಯ ಸಹಿ |
| ನಿ.ಪಿ.12 | : | ಅಬಕಾರಿ ನಿರೀಕ್ಷಕರಿಗೆ ಕೊಟ್ಟ ನಿವೇದನೆ |
| ನಿ.ಪಿ.12(ಎ) | : | ಸಾಕ್ಷಿಯ ಸಹಿ |
| ನಿ.ಪಿ.13 | : | ನಾಗರಾಜುರವರ ಹೇಳಿಕೆ |
| ನಿ.ಪಿ.13(ಎ) | : | ಸಾಕ್ಷಿಯ ಸಹಿ |

3. **<u>ಅಭಿಯೋಜನೆ ಪರ ಗುರುತಿಸಲ್ಪಟ್ಟ ಮುದ್ದೆ ಮಾಲುಗಳ ಪಟ್ಟಿ</u>** :-

ಮು.ಮಾ-1 ರಿಂದ 4 : ಟೆಟ್ರಾ ಪ್ಯಾಕೇಟ್ ಗಳು

4. **<u>ಆರೋಪಿ ಪರ ವಿಚಾರಣೆಗೆ ಒಳ ಪಟ್ಟ ಸಾಕ್ಷಿಗಳ ಪಟ್ಟಿ</u>** :-

ಯಾವುದೂ ಇಲ್ಲ

5. **<u>ಆರೋಪಿ ಪರ ನಿಶಾನೆಗಳಾಗಿ ಗುರುತಿಸಲ್ಪಟ್ಟ ದಾಖಲೆಗಳ ಪಟ್ಟಿ</u>** :-

ಯಾವುದೂ ಇಲ್ಲ.

ಹಿರಿಯ ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.,
ಚಿಕ್ಕನಾಯಕನಹಳ್ಳಿ.